**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07-10-2023.**

**ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ವಿಶೇಷ ಅಧಿಕಾರ ಪತ್ರವನ್ನು - ನಿ.ಪಿ.1 ಎಂದು, ನೋಂದಾಯಿತ ಕ್ರಯಪತ್ರ ದಿ.08-08-1951 ರ ದೃಡೀಕೃತ ನಕಲನ್ನು - ನಿ.ಪಿ.2 ಎಂದು, ದೃಡೀಕೃತ ವಂಶವೃಕ್ಷವನ್ನು - ನಿ.ಪಿ.3 ಎಂದು, ಐ.ಹೆಚ್.ಆರ್. ಸಂಖ್ಯೆ 59-1996-97 ರ ದೃಢೀಕೃತ ಪ್ರತಿಯನ್ನು -ನಿ.ಪಿ.4 ಎಂದು, ದಿ.24-04-2007 ರ ದೇವನಹಳ್ಳಿ ತಹಶೀಲ್ದಾರ್ ಅವರ ಸ್ವೀಕೃತಿ - ನಿ.ಪಿ.5 ಎಂದು, ಭೂಮಿ ಅರ್ಜಿ ಸ್ವೀಕೃತಿಯನ್ನು - ನಿ.ಪಿ.6 ಎಂದು, ಎಂ.ಆರ್.ಸಂಖ್ಯೆ 15-2009-10 ರ ಮ್ಯುಟೇಶನ್ ರಿಜಿಸ್ಟರ್‌ನ ಪ್ರತಿಯನ್ನು -ನಿ.ಪಿ.7 ಎಂದು, ಎಂ.ಆರಿ.ಸಂಖ್ಯೆ 14-2018-19 ರ ಮ್ಯುಟೇಶನ್ ರಿಜಿಸ್ಟರ್‌ನ ಪ್ರತಿಯನ್ನು - ನಿ.ಪಿ.8 ಎಂದು, ಮೂರು ತೆರಿಗೆ ಪಾವತಿ ರಶೀದಿಗಳನ್ನು - ನಿ.ಪಿ.9 ರಿಂದ ನಿ.ಪಿ.11 ಎಂದು, ಎರಡು ಪಟ್ಟಾ ಪುಸ್ತಕಗಳನ್ನು -ನಿ.ಪಿ.12 ಮತ್ತು ನಿ.ಪಿ.13 ಎಂದು, ಜಮೀನಿನ ಹಿಡುವಳಿ ಪ್ರಮಾಣ ಪತ್ರವನ್ನು - ನಿ.ಪಿ.14 ಎಂದು, ದಾವಾ ಸ್ವತ್ತಿನ ಏಳು ಪಹಣಿ ಪತ್ರಿಕೆಗಳನ್ನು - ನಿ.ಪಿ.15 ರಿಂದ ನಿ.ಪಿ.21 ಎಂದು ಗುರುತಿಸಲಾಯಿತು. ಚಿಕ್ಕಮುನಿಶಾಮಪ್ಪ ಅವರ ಮರಣ ಪ್ರಮಾಣ ಪತ್ರವನ್ನು - ನಿ.ಪಿ.22 ಎಂದು, ದಾವಾ ಸ್ವತ್ತಿನ 10 ಪಹಣಿ ಪತ್ರಿಕೆಗಳನ್ನು -ನಿ.ಪಿ.23 ರಿಂದ ನಿ.ಪಿ.32 ಎಂದು, ನೋಂದಾಯಿತ ಕ್ರಯಪತ್ರ ದಿ.01-11-1965 ರ ದೃಢೀಕೃತ ನಕಲನ್ನು - ನಿ.ಪಿ.33 ಎಂದು, ಸದರಿ ಕ್ರಯಪತ್ರದ ಬೆರಳಚ್ಚು ಪ್ರತಿಯನ್ನು - ನಿ.ಪಿ.33(ಎ) ಎಂದು, 1997-98 ರಿಂದ 1999-2000 ದ ಸಾಲಿನ ಪಹಣಿ ಪತ್ರಿಕೆಯನ್ನು - ನಿ.ಪಿ.34 ಎಂದು, ದಾವಾ ಸ್ವತ್ತಿನ 2009-10 ರಿಂದ 2017-18 ರ ವರೆಗಿನ ಎಂಟು ಪಹಣಿ ಪತ್ರಿಕೆಗಳನ್ನು - ನಿ.ಪಿ.35 ರಿಂದ ನಿ.ಪಿ.42 ಎಂದು, ಮಾನ್ಯ ಜಿಲ್ಲಾಧಿಕಾರಿಯವರ ಆದೇಶ ದಿ.26-04-2016 ರ ದೃಢೀಕೃತ ನಕಲನ್ನು -ನಿ.ಪಿ.43 ಎಂದು, ಅಸಲು ದಾವಾ ಸಂಖ್ಯೆ 763-2007 ರ ವಾದ ಪತ್ರ ಮತ್ತು ಆದೇಶ ಪುಟಗಳ ದೃಡೀಕೃತ ನಕಲು ಗಳನ್ನು ಕ್ರಮವಾಗಿ - ನಿ.ಪಿ.44 ಮತ್ತು ನಿ.ಪಿ.45 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿಗಳ ಪರ ವಕೀಲರು ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**